# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 968 |
| ಸದಸ್ಯರ ಹೆಸರು | : ಶ್ರೀ ಎಂ.ಸಿ. ವೇಣುಗೋಪಾಲ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : ಮಾನ್ಯ ಸಣ್ಣ ಕೈಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 19.12.2018. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಣ್ಣ ಕೈಗಾರಿಕೆ ಇಲಾಖೆ ವತಿಯಿಂದ ಉದ್ಯಮ ಪ್ರಾರಂಭಿಸಲು ನೀಡಲಾಗುವ ಕೈಗಾರಿಕಾ ಶೆಡ್ ಅಥವಾ ನಿವೇಶನಗಳಿಗೆ ಯಾವ ಆಧಾರದ ಮೇಲೆ ದರ ನಿಗದಿಪಡಿಸಲಾಗುತ್ತಿದೆ; | • ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿ ಸಲುವಾಗಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತವು ರಾಜ್ಯಾದ್ಯಂತ ವಿವಿಧ ಸ್ಥಳಗಳಲ್ಲಿ ಅವಶ್ಯ ಮೂಲಭೂತ ಸೌಕರ್ಯಗಳನ್ನೊಳಗೊಂಡ ಒಟ್ಟು 187 ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಿರುತ್ತದೆ. ಅಂತೆಯೇ, ನಿಗಮದ ಹಂಚಿಕೆ ನಿಯಮಾವಳಿಗಳನ್ವಯ ಅರ್ಹ ಸಣ್ಣ ಉದ್ದಿಮೆದಾರರುಗಳಿಗೆ ಕೈಗಾರಿಕಾ ಮಳಿಗೆ/ನಿವೇಶನಗಳನ್ನು ಹಂಚಿಕೆ ಮಾಡುತ್ತಿದೆ.<br>• ನಿಗಮವು ನಿರ್ಮಿಸುವ/ಅಭಿವೃದ್ಧಿಪಡಿಸುವ ಕೈಗಾರಿಕಾ ಮಳಿಗೆ/ಫ್ಲಾಟ್ಸ್/ ಅಂಗಡಿ/ ಗೋದಾಮು ಹಾಗೂ ನಿವೇಶನಗಳ ಹಂಚಿಕೆ ಸಲುವಾಗಿ ತನ್ನದೇ ಆದ ಹಂಚಿಕೆ ನಿಯಮಗಳನ್ನು ರೂಪಿಸಿಕೊಂಡಿದ್ದು, ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರಲ್ಲಿ ನಮೂದಿಸಿರುವ ಹಂಚಿಕೆ ಮೀಸಲಾತಿ ಅನ್ವಯ ಸಣ್ಣ ಉದ್ದಿಮೆದಾರರುಗಳಿಗೆ ಮಳಿಗೆ/ನಿವೇಶನಗಳನ್ನು ಹಂಚಿಕೆ ಮಾಡುತ್ತಿದೆ.<br>• ಸರ್ಕಾರದ ನಿರ್ದೇಶನ ಹಾಗೂ ನಿಗಮದ ಮಂಡಳಿಯ ಕಾರ್ಯನೀತಿ ನಿರ್ಣಯಗಳನ್ವಯ ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿನ ನಿವೇಶನ/ಜಮೀನಿನ ಭೂದರಗಳನ್ನು ಕಾಲಕಾಲಕ್ಕೆ ಸರ್ಕಾರವು ಹೊರಡಿಸುವ ಮಾರ್ಗಸೂಚಿ ದರಗಳನ್ನು ಆಧಾರವಾಗಿಟ್ಟುಕೊಂಡು ಹಾಗೂ ಮಂಡಳಿಯ ಮಾರ್ಗಸೂಚಿಗಳನ್ವಯ ನಿವೇಶನ/ ಜಮೀನಿನ ಭೂ-ದರಗಳನ್ನು ಎರಡು ವರ್ಷಕ್ಕೊಮ್ಮೆ ಪರಿಷ್ಕರಿಸಿ ನಿಗದಿಪಡಿಸಲಾಗುತ್ತಿದೆ. |

| | | |
|---|---|---|
| | | • ಮುಂದುವರೆದಂತೆ ನಿಗಮವು ಅಭಿವೃದ್ಧಿಪಡಿಸುವ **ಹೊಸ ಕೈಗಾರಿಕಾ ವಸಾಹತುಗಳಿಗೆ ದರವನ್ನು** ನಿಗದಿಗೊಳಿಸುವ ಬಗ್ಗೆ ಈ ಕೆಳಕಂಡ ಪ್ರಮುಖ ಅಂಶಗಳನ್ನು ಪರಿಗಣಿಸಿ ದರವನ್ನು ನಿಗದಿಗೊಳಿಸುತ್ತಿದೆ.<br>1. ಭೂಸ್ವಾಧೀನಕ್ಕೆ ಹಾಗೂ ನೋಂದಣಿಗೆ ಸಂಬಂಧಿಸಿದ ಎಲ್ಲ ವೆಚ್ಚಗಳು<br>2. ಜಮೀನನ್ನು ಅಭಿವೃದ್ಧಿಪಡಿಸಲು ತಗುಲಿದ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳ ವೆಚ್ಚಗಳು<br>3. ಸರ್ಕಾರಕ್ಕೆ ಸಲ್ಲಿಸಬೇಕಾದ ಶಾಸನಬದ್ಧ ತೆರಿಗೆಗಳು, ಶುಲ್ಕಗಳು ಇತ್ಯಾದಿ ನಿಗದಿಪಡಿಸುವ ಪಾವತಿಗಳ ವೆಚ್ಚ<br>4. ನಿಗಮದ ಸೇವಾ ಶುಲ್ಕಗಳು, ಕೈಗಾರಿಕಾ ವಸಾಹತು ನಿರ್ಮಾಣ ಮಾಡುವ ಸಂದರ್ಭದಲ್ಲಿ ತಗಲುವ ಬಡ್ಡಿ ಇತ್ಯಾದಿಗಳನ್ನು ಅಳವಡಿಸಿ, ಸರ್ಕಾರವು ಅನುದಾನವನ್ನು ನೀಡಿದಲ್ಲಿ, ಸದರಿ ಅನುದಾನದ ಮೊತ್ತವನ್ನು ದರ ನಿಗದಿಪಡಿಸುವ ಮೊತ್ತದಲ್ಲಿ ಕಡಿತಗೊಳಿಸಿ ಸದರಿ ಕೈಗಾರಿಕಾ ವಸಾಹತುವಿನ ಅಭಿವೃದ್ಧಿಪಡಿಸುವ ಭೂ–ವಿಸ್ತೀರ್ಣದಲ್ಲಿ ಮಾರಾಟ ಮಾಡಲು ಲಭ್ಯವಿರುವ ಭೂಮಿಯ ಆಧಾರದ ಮೇಲೆ ಪ್ರೋರೇಟ ದರದಂತೆ ವಿಧಿಸಿ, ಭೂ–ದರವನ್ನು ನಿಗದಿಪಡಿಸಲಾಗುವುದು. |
| ಆ) | ಈ ನಿವೇಶನಗಳನ್ನು ಅಥವಾ ಕೈಗಾರಿಕಾ ಶೆಡ್‌ಗಳನ್ನು ನಿರುದ್ಯೋಗಿ ಯುವಕರಿಗೆ ನೀಡುವಾಗ ಎಷ್ಟು ರಿಯಾಯಿತಿ ನೀಡಲಾಗುವುದು; | **ಸಣ್ಣ ಉದ್ದಿಮೆದಾರರುಗಳಿಗೆ ಈ ಕೆಳಕಂಡ ಸೌಲಭ್ಯ/ರಿಯಾಯಿತಿಗಳನ್ನು ನೀಡಲಾಗುತ್ತಿದೆ**<br>ಕೆಳಕಂಡ ಯೋಜನೆಯಡಿ ಉದ್ದಿಮೆದಾರರಿಗೆ ಕೈಗಾರಿಕಾ ಮಳಿಗೆಗಳ ಹಂಚಿಕೆ:<br>▪ ಸರ್ಕಾರದ ಹೊಸ ಕೈಗಾರಿಕಾ ನೀತಿಯಂತೆ 2014–19ರಂತೆ ಹಂಚಿಕೆ ಮೀಸಲಾತಿ ಅಳವಡಿಸಿಕೊಳ್ಳಲಾಗಿದೆ.<br>1. ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ – 22.50%<br>2. ಮಹಿಳಾ ಉದ್ಯಮಿಗಳು – 5%<br>3. ಅಲ್ಪಸಂಖ್ಯಾತರು, ವಿಕಲಚೇತನರು, ಹಿಂದುಳಿದ ವರ್ಗ(ವರ್ಗ–1 & 2ಎ) ಮಾಜಿ ಸೈನಿಕರು – 10.00% |

| | | |
|---|---|---|
| | | ▪ ಹೊಸ ಕೈಗಾರಿಕಾ ನೀತಿ 2014–19 ರ ಅನ್ವಯ ಕೆಎಸ್ಎಸ್ಐಡಿಸಿ ಯಿಂದ ಅಭಿವೃದ್ಧಿಪಡಿಸಿರುವ/ಅಭಿವೃದ್ಧಿಪಡಿಸುವ ಮಳಿಗೆ ಮತ್ತು ನಿವೇಶನಗಳ ಹಂಚಿಕೆ ಹಾಗೂ ಪ.ಜಾತಿ/ಪ.ಪಂಗಡದ/ಇತರೆ ವರ್ಗದ ಉದ್ದಿಮೆದಾರರುಗಳಿಗೆ ನೀಡುತ್ತಿರುವ ರಿಯಾಯಿತಿಗಳ ವಿವರಗಳು ಕೆಳಕಂಡಂತಿವೆ.<br>▪ ನಿಗಮದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡಲ್ಪಡುವ ಮಳಿಗೆ/ನಿವೇಶನಗಳಿಗೆ ಹಂಚಿಕೆ ಸಂದರ್ಭದಲ್ಲಿಯೇ ಶೇಕಡ 50ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದೆ. ಹಂಚಿಕೆ ಪಡೆದ ಉದ್ದಿಮೆದಾರರಿಂದ ನಿವೇಶನ/ಮಳಿಗೆಯ ಶೇಕಡಾ 25ರಷ್ಟು ಮೌಲ್ಯವನ್ನು ಮೊದಲು (Upfront) ನಿಗಮವು ಪಡೆದುಕೊಳ್ಳುತ್ತಿದ್ದು, ನಂತರ, ಉಳಿದ ಶೇಕಡಾ 25ರಷ್ಟು ನಿವೇಶನ / ಮಳಿಗೆಯ ಮೌಲ್ಯದ ಮೊತ್ತವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ವಾರ್ಷಿಕ ಶೇಕಡ 12.5ರ ಬಡ್ಡಿ ದರದೊಂದಿಗೆ ವಸೂಲಾತಿ ಮಾಡಿಕೊಳ್ಳಲಾಗುತ್ತಿದೆ.<br>▪ ಅಲ್ಪಸಂಖ್ಯಾತ, ಹಿಂದುಳಿದ ವರ್ಗ (ವರ್ಗ–1 & ವರ್ಗ–2ಎ), ವಿಕಲಚೇತನ ಹಾಗೂ ಮಾಜಿ ಸೈನಿಕ ಉದ್ದಿಮೆದಾರರುಗಳಿಗೆ ನಿವೇಶನ ಮತ್ತು ಮಳಿಗೆಗಳ ಮೊತ್ತವನ್ನು 6 ಸಮ ತ್ರೈಮಾಸಿಕ ಕಂತುಗಳಲ್ಲಿ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.<br>▪ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಎಸ್‌ಸಿಪಿ ಹಾಗೂ ಟಿಎಸ್‌ಪಿ ಯೋಜನೆಯಡಿ ರಾಜ್ಯಾದ್ಯಂತ 100ಸಿ ಮತ್ತು 100ಡಿ ಮಾದರಿ ಕೈಗಾರಿಕಾ ಮಳಿಗೆಗಳನ್ನು ನಿರ್ಮಿಸಲಾಗುತ್ತಿದ್ದು, ಮಳಿಗೆ ಮೌಲ್ಯದ ಶೇ. 90 ರಷ್ಟು ಹಾಗೂ ಭೂಮಿಗೆ ಶೇಕಡ 50ರಷ್ಟು ಸಹಾಯಧನವನ್ನು ವಿಸ್ತರಿಸಲಾಗುತ್ತಿದೆ. |
| ಇ) | ಸಣ್ಣ ಕೈಗಾರಿಕೆ ಸ್ಥಾಪನೆ ಮಾಡುವವರಿಗೆ ಶೇ.50ರ ರಿಯಾಯಿತಿ ದರದಲ್ಲಿ ನಿವೇಶನ ಮತ್ತು ಶೆಡ್‌ಗಳನ್ನು ನೀಡಲು ಸರ್ಕಾರಕ್ಕಿರುವ ತೊಂದರೆಯೇನು; | ಸರ್ಕಾರದ ಹೊಸ ಕೈಗಾರಿಕಾ ನೀತಿ 2014–19ರನ್ವಯ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡಲ್ಪಡುವ ನಿವೇಶನ ಹಂಚಿಕೆಯಲ್ಲಿ ಶೇಕಡ 50ರಷ್ಟು ಮತ್ತು ಮಳಿಗೆ ಹಂಚಿಕೆಯಲ್ಲಿ ಶೇಕಡ 90ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದೆ. ಕೆ.ಐ.ಎ.ಡಿ.ಬಿ. / ಕೆ.ಎಸ್.ಎಸ್.ಐ.ಡಿ.ಸಿ. ಸಂಸ್ಥೆಗಳಿಂದ ಹಿಂದುಳಿದ ಪ್ರವರ್ಗ–1, ಪ್ರವರ್ಗ–2ಎ ಮತ್ತು ಪ್ರವರ್ಗ–2ಬಿ ರವರಿಗೆ ಮಂಜೂರು / ಹಂಚಿಕೆ ಮಾಡಲಾಗುವ ಪ್ಲಾಟ್ / ಶೆಡ್‌ಗಳ ಒಟ್ಟು ಮೊತ್ತದಲ್ಲಿ ಶೇಕಡ 25ರಷ್ಟು ರಿಯಾಯಿತಿ ನೀಡಲು ಸರ್ಕಾರವು ತಾತ್ವಿಕ ಅನುಮೋದನೆ (In-principle approval) ನೀಡಿದೆ. |

| | | |
|---|---|---|
| ಈ) | ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು? | - ಸಣ್ಣ ಕೈಗಾರಿಕೆ ಸ್ಥಾಪಿಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ನಿವೇಶನ ಹಂಚಿಕೆಯಲ್ಲಿ ಶೇಕಡ 50ರಷ್ಟು ಮತ್ತು ಮಳಿಗೆ ಹಂಚಿಕೆಯಲ್ಲಿ ಶೇಕಡ 90ರಷ್ಟು ರಿಯಾಯಿತಿ ನೀಡಲು ಸರ್ಕಾರವು ಈಗಾಗಲೇ ಸರ್ಕಾರದ ಆದೇಶ ಸಂ: ಸಿಐ 81 ಸಿಎಸ್‌ಸಿ 2016, ದಿನಾಂಕ: 27.06.2016ರಲ್ಲಿ ಹೊರಡಿಸಿರುತ್ತದೆ.<br>▪ ಸರ್ಕಾರದ ಆದೇಶ ಸಂ: ಸಿಐ 113 ಎಸ್‌ಪಿಐ 2017, ದಿನಾಂಕ: 28.12.2017ರ ಆದೇಶದಲ್ಲಿ ಕೆ.ಐ.ಎ.ಡಿ.ಬಿ. / ಕೆ.ಎಸ್.ಎಸ್.ಐ.ಡಿ.ಸಿ. ಸಂಸ್ಥೆಗಳಿಂದ ಹಿಂದುಳಿದ ಪ್ರವರ್ಗ-1, ಪ್ರವರ್ಗ-2ಎ ಮತ್ತು ಪ್ರವರ್ಗ-2ಬಿ ರವರಿಗೆ ಮಂಜೂರು / ಹಂಚಿಕೆ ಮಾಡಲಾಗುವ ಪ್ಲಾಟ್ / ಶೆಡ್‌ಗಳ ಒಟ್ಟು ಮೊತ್ತದಲ್ಲಿ ಶೇಕಡ 25ರಷ್ಟು ರಿಯಾಯಿತಿ ನೀಡಲು ಸರ್ಕಾರವು ತಾತ್ವಿಕ ಅನುಮೋದನೆ (In-principle approval) ನೀಡಿದೆ.<br>▪ ಕೈಗಾರಿಕಾ ನೀತಿ 2014-19ರನ್ವಯ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಈ ಕುರಿತು ಅನುಮೋದನೆ ನೀಡಲು ಈಗಾಗಲೇ ಕ್ರಮವಹಿಸಲಾಗುತ್ತಿದೆ. |

**ಸಿಐ 134 ಸಿಎಸ್‌ಸಿ 2018**

[ಎಸ್.ಆರ್. ಶ್ರೀನಿವಾಸ್ (ವಾಸು)]
**ಸಣ್ಣ ಕೈಗಾರಿಕೆ ಸಚಿವರು**